ಗುಣಮುಖರಾಗಿದ್ದರು, ಆದರೆ ನಿಶ್ಶಕ್ತಿ ತುಂಬಾ ಬಾಧಿಸುತ್ತಿತ್ತು. ಹರಿಲಾಲ ಖುದ್ದು ಬಾಪೂ ಅವರ ಬಳಿ ಎರಡು ಮೂರು ದಿನಗಳಿದ್ದ. ಆದರೆ ಬಾ ಮತ್ತು ಪರಿವಾರದ ಸದಸ್ಯರು ಫೀನಿಕ್ಸ್ ಆಶ್ರಮದಲ್ಲಿಯೇ ಇದ್ದರು. ಅವರೆಲ್ಲರೂ ಫೀನಿಕ್ಸ್ ಆಶ್ರಮದಿಂದ ಜೋಹಾನ್ಸ್‌ಬರ್ಗ್‌ಗೆ ಓಡಿ ಬರಬಾರದೆಂದು ಬಾಪೂ ಅವರು ತಾವು ಕ್ಷೇಮವಾಗಿರುವ ಬಗ್ಗೆ ತಂತಿಸಂದೇಶವನ್ನು ಕಳುಹಿಸಿದ್ದರು. ಅಲ್ಲದೆ 'ರೈಲಿನ ಟಿಕೆಟ್‌ಗೆ ಹಣವನ್ನು ಖರ್ಚು ಮಾಡಿ ಇಲ್ಲಿಗೆ ಬರುವ ಅಗತ್ಯವೂ ಇಲ್ಲ, ನಾನು ಕೆಲವೇ ದಿನಗಳಲ್ಲಿ ಮರಳಿ ಆಶ್ರಮಕ್ಕೆ ಬರುತ್ತೇನೆ' ಎಂದೂ ಸಂದೇಶದಲ್ಲಿ ತಿಳಿಸಿದ್ದರು. ರಕ್ತ ಹರಿದಿದ್ದರಿಂದಾಗಿ ಬಾಪೂ ಅವರಿಗೆ ಸುಸ್ತು ಮತ್ತು ದಣಿವು ಕಾಡುತ್ತಿತ್ತು, ಇದು ಕಡಿಮೆಯಾಗುತ್ತಲೇ ಅವರು ಆಶ್ರಮಕ್ಕೆ ಬಂದರು.

ಫೀನಿಕ್ಸ್ ಆಶ್ರಮಕ್ಕೆ ಹೊಸ ಜೀವವೇ ಬಂದಂತಾಯಿತು. ಅವರ ಶರೀರದಲ್ಲಿ ಗಾಯಗಳ ಗುರುತು ಇನ್ನೂ ಸ್ಪಷ್ಟವಾಗಿ ಕಾಣಿಸುತ್ತಿದ್ದವು. ತಲೆಯ ಕೂದಲುಗಳನ್ನು ವೈದ್ಯಕೀಯ ಪರೀಕ್ಷೆಗಾಗಿ ನಡುವಿನಿಂದ ತೆಗೆಸಲಾಗಿತ್ತು. ಗಾಯಗಳ ಮೇಲೆ ಬ್ಯಾಂಡೇಜ್ ಹಾಕಲಾಗಿತ್ತು. ಆಶ್ರಮಕ್ಕೆ ಬರುತ್ತಲೇ ಗಾಂಧಿಜಿಯವರು ವೈದ್ಯಕೀಯ ಚಿಕಿತ್ಸೆಗೆ ವಿದಾಯ ಹೇಳಿದರು. ನಿತ್ಯ ಬೆಳಿಗ್ಗೆ ಸಂಜೆಯ ವೇಳೆಯಲ್ಲಿ ಗಾಯಗಳನ್ನು ತಣ್ಣನೆಯ ನೀರಿನಿಂದ ತೊಳೆದು, ಅವುಗಳ ಮೇಲೆ ತಾಜಾ ಕಪ್ಪು ಮಣ್ಣಿನ ಬೆಚ್ಚನೆ ಮುದ್ದೆ ಮಾಡಿ ಕಟ್ಟಲಾಗುತ್ತಿತ್ತು. ಈ ಚಿಕಿತ್ಸೆಯೇ ಮುಂದುವರೆಯಿತು. ಚಿಕಿತ್ಸೆಯ ಕೆಲಸ ಪೂರ್ಣವಾಗುತ್ತಲೇ ಬರೆಯುವ ಕೆಲಸ ಆರಂಭಗೊಳ್ಳುತ್ತಿತ್ತು. ಗಂಟೆಗಟ್ಟಲೆ ಓದುವುದು ಬರೆಯುವುದು ನಡೆಯುತ್ತಲೇ ಇತ್ತು. ಬರವಣಿಗೆಯಿಂದ ಬಿಡುವು ದೊರೆಯುತ್ತಲೇ ಬಾಪೂ ತಕ್ಷಣ ಸುತ್ತಿಗೆ, ಮೊಳೆಗಳು ಮತ್ತು ಇನ್ನಿತರ ಸಾಮಗ್ರಿಗಳೊಂದಿಗೆ ಆಶ್ರಮವಾಸಿಗಳನ್ನು ಮತ್ತು ವಿಶೇಷವಾಗಿ 'ವಾನರಸೈನ್ಯ'ದ ಮಕ್ಕಳೊಂದಿಗೆ ಕೆಲಸವನ್ನು ಆರಂಭಿಸುತ್ತಿದ್ದರು. ಪುಸ್ತಕಗಳ ರ‍್ಯಾಕ್ ತಯಾರಿಸುವುದು, ಮೆಟ್ಟಿಲುಗಳನ್ನು ಕಟ್ಟುವುದು ಇಂಥ ಕೆಲಸಗಳು ನಡೆಯುತ್ತಿದ್ದವು. ನಂತರ ತಡ ರಾತ್ರಿಯವರೆಗೆ ಪ್ರೆಸ್ ಕೆಲಸಗಳು'ಇಂಡಿಯನ್ ಒಪೀನಿಯನ್' ಪ್ರತಿಗಳ ಮುದ್ರಣ, ಅವುಗಳನ್ನು ಕಟ್ಟುವುದು, ಪಾರ್ಸಲ್ ಮಾಡುವುದು ನಡೆಯುತ್ತಿದ್ದವು. ಈ ಎಲ್ಲಾ ದಣಿವಿನ ಕೆಲಸದ ನಂತರ ಭಜನಾಸಭೆ ಕಲೆಯುತ್ತಿತ್ತು.

ಹಾಗೆಯೇ ನಿಂತಿದ್ದ ಗುಲಾಬಳ ಮಡಿಲು ತುಂಬುವ ಸಂದರ್ಭದ ಭೋಜನದ ಕಾರ್ಯಕ್ರಮಕ್ಕೆ ಈಗ ಮರುಜೀವ ಬಂದಿತ್ತು. ರಾಮನವಮಿ ಹಬ್ಬದ ಸಂದರ್ಭವಾಗಿತ್ತು; ಹೀಗಾಗಿ ಬಹಳಷ್ಟು ಆಶ್ರಮವಾಸಿಗಳಿಗೆ ಅದು ಉಪವಾಸವ್ರತದ ದಿನವಾಗಿತ್ತು. ಅಂದು ಬಾಪೂ ಅವರು ಮುಂಜಾನೆಯೇ ಎಲ್ಲರನ್ನು ಸೇರಿಸಿ ಭಜನೆ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಉಪವಾಸವ್ರತವನ್ನು ಮಾಡದವರಿಗೆ ಬಾಪೂ ವಿಶೇಷವಾಗಿ ಆಗ್ರಹಿಸಿ ಇಂದು ಎರಡನೆಯ ಬಾರಿಗೆ ಹೋಳಿಗೆಯನ್ನು ಮಾಡಿಸಿದರು.

'ನೋಡಿ, ನಿಮಗೆ ಪ್ರಿಯವಾದ ತಿನಿಸಿನ ರುಚಿಯನ್ನು ಸಹ ಇಂದು ನೀವು ನೋಡಲಾರಿರಿ...' ಬಾ ಅವರು ಬಾಪೂ ಅವರಿಗೆ ಹೇಳಿದರು, 'ಉಪವಾಸದ ಈ ದಿನ ಹೋಳಿಗೆಯನ್ನು ಮಾಡಿಸದಿದ್ದರೆ...'

'ನೋಡು ಬಾ, ಉಪವಾಸವೆಂದರೆ, ಯಾವುದೇ ರುಚಿಗೆ ನಾಲಿಗೆ ಆಸೆಪಡಬಾರದು ಎಂದರ್ಥ; ಇದೇ ಉಪವಾಸದ ಮಹತ್ವವೂ ಆಗಿದೆ. ನಮಗಿಷ್ಟವಾದ ತಿನಿಸುಗಳು ಎದುರಿಗಿದ್ದಾಗ್ಯೂ ಸಹ, ಅದರ ಸ್ವಾದಕ್ಕೆ ನಾಲಿಗೆ ಬಲಿಯಾಗಬಾರದು, ಇದೇ ನಿಜವಾದ ಉಪವಾಸವಾಗಿದೆ.

ಅಲ್ಲದೆ ಚಂಚಿ ಸೊಸೆಗೆ ದಿನಗಳಾಗಿವೆ... ನಾಳೆ ಬೆಳಿಗ್ಗೆಯೇ ನನಗೆ ಸರ್ಕಾರದಿಂದ ಆಹ್ವಾನ ಬರಬಹುದು, ಆಗ ಸೊಸೆಗೆ ಮಾವ ನನ್ನ ಬಗ್ಗೆ ಗಮನಕೊಡಲಿಲ್ಲ ಎಂದು ಅನ್ನಿಸಬಾರದು.' ಹೀಗೆಂದು ಬಾಪೂ ನಕ್ಕರು, 'ಸೊಸೆಗೆ ಹೋಳಿಗೆಯನ್ನು ತುಪ್ಪದಲ್ಲಿ ಅದ್ದಿ ತಿನ್ನಿಸು, ತಿಳಿಯಿತೇ?'

ದೂರದಲ್ಲಿ ನಿಂತು ಈ ಮಾತುಕತೆಯನ್ನು ಕೇಳುತ್ತಿದ್ದ ಗುಲಾಬ ನಾಚಿ ತಲೆಯನ್ನು ತಗ್ಗಿಸಿದಳು. ಅವಳು ಕೂಡಲೇ ಹೊರಗೆ ಹೋದಳು. ಅವಳ ತುಟಿಗಳಲ್ಲಿ ನಗು ಲಾಸ್ಯವಾಡುತ್ತಿತ್ತು.

ಅಂದು ಸಂಜೆ ಆಶ್ರಮವಾಸಿಗಳು ಹೊಸ ಸಮಾಚಾರವೊಂದನ್ನು ಕೇಳಲು ಗುಲಾಬಳ ಕೋಣೆಯ ಹೊರಗೆ ಜಮಾಯಿಸಿದ್ದರು. ಮಧ್ಯಾಹ್ನದ ನಂತರ ಗುಲಾಬಳ ಆರೋಗ್ಯ, ಹೊಸ ಅತಿಥಿಯ ಆಗಮನದ ಸೂಚನೆಯನ್ನು ಕೊಟ್ಟಿತ್ತು. ಬಾ ಮತ್ತು ಆಶ್ರಮದ ಒಂದಿಬ್ಬರು ಮಹಿಳೆಯರು ಸಿದ್ಧತೆಯಲ್ಲಿ ತೊಡಗಿಕೊಂಡಿದ್ದರು. ಹರಿಲಾಲ ಮತ್ತು ಬಾಪೂ, 'ಇಂಡಿಯನ್ ಒಪೀನಿಯನ್' ಕೆಲಸದಲ್ಲಿ ಮಗ್ನರಾಗಿದ್ದರು; ಆದರೆ ಇಬ್ಬರ ಕಿವಿಗಳು ಹೊಸ ಸುದ್ದಿಯನ್ನು ಕೇಳಲು ಕಾತರಿಸುತ್ತಿದ್ದವು. ಹರಿಲಾಲನ ಮನಸ್ಸು ಕೆಲಸದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತಿರಲಿಲ್ಲ. ಆದರೆ ಇದು ಬಾಪೂ ಅವರಿಗೆ ತಿಳಿಯಬಾರದೆಂದು ಹರಿಲಾಲ ಪ್ರಯತ್ನಿಸುತ್ತಿದ್ದ.

'ಬಾಪೂ...ಬಾಪೂ...ನಿಮಗೆ ಅಭಿನಂದನೆಗಳು. ಬಾ ಅವರ ಆಸೆ ಈಡೇರಿದೆ... ಆಶ್ರಮಕ್ಕೆ ಲಕ್ಷ್ಮೀ ಬಂದಿದ್ದಾಳೆ.' ಆಶ್ರಮವಾಸಿಯ ಕನ್ಯೆಯೊಬ್ಬಳು ಉತ್ಸಾಹದಿಂದ ಓಡೋಡಿ ಬಂದು ಸುದ್ದಿಯನ್ನು ತಿಳಿಸಿದಳು. ಅವಳ ಧ್ವನಿ ಕೇಳಿ ಆಶ್ರಮದ ಮರಗಿಡಗಳೆಲ್ಲಾ ಸಂತಸದಿಂದ ಬೀಗಿದವು. ಶೀತಲ ಮತ್ತು ಹಿತವಾದ ಗಾಳಿ ಬೀಸುತ್ತಿತ್ತು.

ಕೆಲಸ ಮಾಡುತ್ತಿದ್ದ ಹರಿಲಾಲ ಕೈಗಳು ನಿಂತವು.

'ಓಹ್ ಲಕ್ಷ್ಮೀ...' ಬಾಪೂ ನಗುತ್ತಾ ಹೇಳಿದರು, 'ಎಂಥ ಸುಂದರ ಯೋಗ. ಇಂದು ರಾಮನವಮಿಯ ದಿನವಾಗಿದ್ದು ಲಕ್ಷ್ಮೀ ಬಂದಿದ್ದಾಳೆ, ರಾಮನವಮಿಯ ದಿನ ಹೆಣ್ಣು ಮಗು ಜನಿಸಿದ್ದು, ಇದು ರಾಮನ ಉಡುಗೊರೆಯೇ ಆಗಿದೆ...ನಾವು ಮಗುವಿಗೆ 'ರಾಮಿ' ಎಂದು ಹೆಸರನ್ನಿಡೋಣ.' ಹೀಗೆಂದು ಬಾಪೂ ಹರಿಲಾಲನನ್ನು ನೋಡಿದರು, 'ಸರಿ ತಾನೇ ಹರಿ? ರಾಮಿ ಎಷ್ಟು ಪ್ರೀತಿಯ ಹೆಸರು, ರಾಮನ ಉಡುಗೊರೆ!'

## ಹತ್ತು

ಹರಿಲಾಲ ತಂದೆಯಾದ ನಂತರ ಆಶ್ರಮದಲ್ಲಿ ಕೇವಲ ನಾಲ್ಕು ದಿನಗಳು ಮಾತ್ರ ಇದ್ದ. ಒಪ್ಪಂದದ ಬಗ್ಗೆ ಸರ್ಕಾರದೆದುರು ಇಡಲಾಗಿದ್ದ ಶರತ್ತುಗಳು ಹಾಗೂ ಆಗ ಎದುರಾಗಿದ್ದ ಅನುಮಾನ ನಿಜವಾಯಿತು. ಬಿಳಿ ಸರ್ಕಾರ ತಾನು ಕೊಟ್ಟ ಮಾತಿಗೆ ತಪ್ಪುತ್ತಿತ್ತು. ಬಾಪೂ ಅವರಿಗೆ ಮೋಸ ಮಾಡುತ್ತಿರುವುದು ಸ್ಪಷ್ಟವಾಗಿತ್ತು. ದೇಶದಲ್ಲಿ ಕೋಲಾಹಲವುಂಟಾಗಿತ್ತು. ಬಾಪೂ ಅವರು ಹೋರಾಟಕ್ಕೆ ಹೊಸದಾಗಿ ಜೀವ ತುಂಬಲು ಜೋಹಾನ್ಸ್‌ಬರ್ಗ್‌ಗೆ ಹೋದರು. ಈ ಬಾರಿ ಹೋರಾಟವನ್ನು ಒಂದು ಪಾರ್ಶ್ವದಿಂದ ಮಾಡದೆ ಬೇರೆ ಬೇರೆ ಪಾರ್ಶ್ವಗಳಿಂದ ಮಾಡಲಾಗುವುದು ಎಂದು ನಿರ್ಧಾರವಾಗಿತ್ತು. ಹೋರಾಟ ದೀರ್ಘ ಕಾಲ ನಡೆಯುವುದು ಹಾಗೂ ಹೋರಾಟದ ಕೊನೆಯ ನಿರ್ಣಾಯಕ ಘಟ್ಟ ಆರಂಭಗೊಂಡಿದೆ ಎಂಬುದನ್ನು ಎಲ್ಲರೂ ತಿಳಿದಿದ್ದರು.

ಹರಿಲಾಲ ನಿಶ್ಚಯಿಸಿದ. ಇನ್ನು ತಾನು ದೀರ್ಘ ಅವಧಿಯವರೆಗೆ ಈ ಹೋರಾಟದಲ್ಲಿ ಮೂಕ ಪ್ರೇಕ್ಷಕನಾಗಿರಲಾರ. ಇದು ತನಗೆ ಶೋಭೆ ತರುವಂಥದ್ದಲ್ಲ; ಭಾರತೀಯರೆಲ್ಲರೂ ಜೀವನ್ಮರಣದ ಪ್ರಶ್ನೆಯನ್ನಿಟ್ಟುಕೊಂಡು ಸರ್ಕಾರದೊಂದಿಗೆ ಹೋರಾಟ ಮಾಡುತ್ತಿರುವಾಗ, ತಾನು ಆಶ್ರಮದಲ್ಲಿ ಕೂತು ಸುರಕ್ಷಿತವಾಗಿ ದಿನಗಳನ್ನು ದೂಡುವುದು ಸರಿಯಲ್ಲ. ಗುಲಾಬಳ ಒಪ್ಪಿಗೆಯಂತೂ ಸಿಕ್ಕಿತ್ತು. ಇನ್ನು ಬಾ ಅವರು ಒಪ್ಪಿಗೆಯನ್ನು ಕೊಡುವುದಿಲ್ಲ ಎಂಬ ಪ್ರಶ್ನೆಯೇ ಏಳುತ್ತಿರಲಿಲ್ಲ. ಬಾಪೂ ಅವರು, 'ಹರಿಲಾಲ ಸತ್ಯಾಗ್ರಹಿಯಾಗಿ ಬಂಧಿಸಲ್ಪಟ್ಟು ಜೈಲಿಗೆ ಹೋದ ದಿನ ನನಗೆ ಸಂತೋಷದ ದಿನವಾಗುವುದು' ಎಂದು ಈ ಮೊದಲೇ ಹೇಳಿದ್ದರು.

ಹರಿಲಾಲ ಬ್ರಿಟಿಷ್ ಸರ್ಕಾರಕ್ಕೆ ತಾನು ಸತ್ಯಾಗ್ರಹವನ್ನು ಮಾಡುವ ತೀರ್ಮಾನವನ್ನು ಸೂಚಿಸುತ್ತಾ ಪತ್ರವೊಂದನ್ನು ಬರೆದ. ತಾನು ಯಾವ ದಿನದಂದು. ಯಾವ ಸ್ಥಳದಲ್ಲಿ, ಎಷ್ಟು ಸಂಗಡಿಗರೊಂದಿಗೆ ಸರ್ಕಾರಿ ಕಾನೂನನ್ನು ಭಗ್ನಗೊಳಿಸಿ ಸತ್ಯಾಗ್ರಹವನ್ನು ಮಾಡುತ್ತೇನೆ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಅಧಿಕಾರಿಗಳಿಗೆ ತಿಳಿಸಿದ. ಹರಿಲಾಲ ಸತ್ಯಾಗ್ರಹದ ಸಣ್ಣ ತುಕಡಿಯೊಂದರ ನೇತೃತ್ವವನ್ನು ವಹಿಸಿಕೊಳ್ಳುತ್ತಿರುವ ಘೋಷಣೆಯೊಂದಿಗೆ ಆಶ್ರಮದಲ್ಲಿ ಉತ್ಸಾಹದ ಚಿಲುಮೆ ಚಿಮ್ಮಿತು. ಜೋಹಾನ್ಸ್‌ಬರ್ಗ್‌ನಿಂದ ಬಾಪೂ ಸಹ ಹರಿಲಾಲನ ಈ ಸತ್ಯಾಗ್ರಹದ ತುಕಡಿಗೆ ತಮ್ಮ ಆಶೀರ್ವಾದವನ್ನು ಕಳುಹಿಸಿದರು. ಹರಿಲಾಲನ ಉತ್ಸಾಹ ಇಮ್ಮಡಿಯಾಯಿತು. ನಿಶ್ಚಿತ ದಿನದಂದು ಹರಿಲಾಲ ಆಶ್ರಮವನ್ನು ತ್ಯಜಿಸಿದ. ಆಶ್ರಮವನ್ನು ತ್ಯಜಿಸುವುದಕ್ಕೂ ಮೊದಲು ಗುಲಾಬಳ ಬಳಿಗೆ ಹೋಗಿ ರಾಮಿಯನ್ನು ಮುದ್ದು ಮಾಡಿದ. ಮೂರು ತಿಂಗಳ ರಾಮಿ ತಂದೆಯ ಸ್ಪರ್ಶದಿಂದ ಪುಳಕಿತಗೊಂಡಂತೆ ಭಾಸವಾಯಿತು.

ಮಗುವಿನ ಮುಖದಲ್ಲಿನ ಸಂತಸವನ್ನು ಕಂಡು ಗುಲಾಬಳ ಮುಖ ಸಹ ಅರಳಿತು. ಹರಿಲಾಲ